ದಿನಾಂಕ 01–07–2020ರಿಂದ ಆದಾಯ ತೆರಿಗೆ ಕಲಂ 194ಎನ್ ರ ಬದಲಾವಣೆಗಳು

ಬಹುಶಃ ನೆನಪಿರಬಹುದು ನಿಮಗೆ, ಕೇಂದ್ರ ಸರ್ಕಾರವು ನಗದು ವ್ಯವಹಾರಗಳನ್ನು ಕಡಿಮೆ ಮಾಡಲು ಆದಾಯ ತೆರಿಗೆ ಕಾಯ್ದೆಯಲ್ಲಿ 194ಎನ್ ಎಂಬ ಕಲಂ ಅನ್ನು ಸೇರಿಸಿ ದಿನಾಂಕ 01–09–2019ರಿಂದ ಜಾರಿಗೆ ತಂದಿತು. ಈ ಕಲಂ ಪ್ರಕಾರ ಯಾವುದೇ ಬ್ಯಾಂಕ್ ಅಥವಾ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತಿರುವ ಸಹಕಾರಿ ಸಂಸ್ಥೆಗಳು (ಅಂದರೆ ಸಹಕಾರಿ ಬ್ಯಾಂಕುಗಳು) ಅಥವಾ ಅಂಚೆ ಕಛೇರಿಗಳು ಯಾವುದೇ ಒಬ್ಬ ವ್ಯಕ್ತಿಗೆ ವಾರ್ಷಿಕವಾಗಿ ರೂ. 1 ಕೋಟಿಗೆ ಮೀರಿ ನಗದು ಪಾವತಿಸಿದರೆ, ಒಂದು ಕೋಟಿ ರೂಗಳಿಗೆ ಮೀರಿದ ನಗದು ಪಾವತಿಯ ಮೇಲೆ ಶೇ 2ರಷ್ಟು ತೆರಿಗೆಯನ್ನು ಕಡಿತಮಾಡಬೇಕು. ಆದರೆ ಈ ನಿಯಮವು ಸರ್ಕಾರಕ್ಕೆ ಅಥವಾ ಬ್ಯಾಂಕ್‌ಗಳಿಗೆ ಅಥವಾ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತಿರುವ ಸಹಕಾರಿ ಸಂಸ್ಥೆಗಳಿಗೆ ಅಥವಾ ಅಂಚೆ ಕಛೇರಿಗಳಿಗೆ ಅಥವಾ ಕೇಂದ್ರ ಸರ್ಕಾರವು ಆರ್‌ಬಿಐ ಜೊತೆಗೆ ಸಮಾಲೋಚಿಸಿದ ನಂತರ ಅಧಿಕೃತ ಗೆಜೆಟ್‌ನಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ಮಾಡುವ ಪಾವತಿಗಳಿಗೆ ಅನ್ವಹಿಸುವುದಿಲ್ಲ. ಅದರಂತೆ, ಕೇಂದ್ರ ಸರ್ಕಾರವು ಆರ್‌ಬಿಐ ಜೊತೆಗೆ ಸಮಾಲೋಚಿಸಿ ದಿನಾಂಕ 20–09–2019ರ 70/2019 ಆದಾಯ ತೆರಿಗೆ ಅಧಿಸೂಚನೆಯ ಪ್ರಕಾರ ಕೃಷಿ ಉತ್ಪಾದನಾ ಮಾರುಕಟ್ಟೆ ಸಮಿತಿಯಡಿಯಲ್ಲಿ ಕಾರ್ಯನಿರ್ವಹಿಸುವ ದಲ್ಲಾಳಿಗಳು ಅಥವಾ ವ್ಯಾಪಾರಸ್ಥರು ತಮ್ಮ ಖಾತೆಯಿಂದ ಪಡೆಯುವ ನಗದಿಗೆ ಈ ನಿಯಮದ ವಿನಾಯಿತಿಯನ್ನು ನೀಡಿರುತ್ತದೆ. ಇಲ್ಲಿ ಗಮನಿಸುವ ಅಂಶ ಏನೆಂದರೆ, ಈ ಅಧಿಸೂಚನೆಯ ಪ್ರಕಾರ ಕೃಷಿಕರಿಗೆ ಅವರ ಮಾಲುಗಳ ಸಂಬಂಧ ದಲ್ಲಾಳಿಗಳು ಅಥವಾ ವ್ಯಾಪಾರಸ್ಥರು ನೀಡುವ ಪಾವತಿಗಳಿಗೆ ಮಾತ್ರ ಈ ಅಧಿಸೂಚನೆಯಡಿಯಲ್ಲಿ ವಿನಾಯತಿ ಇರುತ್ತದೆಯೆ ಹೊರತು ಇನ್ನಿತರೆ ಪಾವತಿಗಳಿಗೆ ಇರುವುದಿಲ್ಲ.
ಕೇಂದ್ರ ಸರ್ಕರವು ಮೇಲ್ಕಂಡ ಕಲಂ ಗೆ 2020ರ ವಿತ್ತೀಯ ಕಾಯ್ದೆಯ ಮೂಲಕ ದಿನಾಂಕ 01–07–2020ರಿಂದ ಜಾರಿಗೆ ಬರುವಂತೆ ಕೆಲವು ಅಂಶಗಳನ್ನು ಸೇರ್ಪಡಿಸಿದ್ದು ಅವು ಕೆಳಕಾಣಿಸಿದಂತಿವೆ.

ಯಾವುದೇ ಒಬ್ಬ ವ್ಯಕ್ತಿಯು ಕಲಂ 139(1)ರ ಪ್ರಕಾರ ಕಳೆದ 3 ವರ್ಷಗಳಲ್ಲಿ ಸತತವಾಗಿ ಆದಾಯ ತೆರಿಗೆಯ ವರದಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ವ್ಯಕ್ತಿಗಳು ತನ್ನ ಖಾತೆಗಳಿಂದ ನಗದನ್ನು ಹಿಂಪಡೆಯುತ್ತಿದ್ದಲ್ಲಿ ಕೆಳಕಂಡಂತೆ ಮೂಲದಲ್ಲಿ ತೆರಿಗೆಯನ್ನು ಕಡಿತಮಾಡಲಾಗುತ್ತದೆ.

1. ನಗದು ಹಿಂಪಡೆತವು ವಾರ್ಷಿಕವಾಗಿ ರೂ 20 ಲಕ್ಷಕ್ಕಿಂತ ಹೆಚ್ಚು ಮತ್ತು ರೂ. 1 ಕೋಟಿಯವರೆಗೆ ಇದ್ದರೆ, ಶೇ 2 ರಷ್ಟು ಅಥವಾ
2. ರೂ 1 ಕೋಟಿಗಿಂತ ಮೀರಿದರೆ, ಹೆಚ್ಚುವರಿ ಹಿಂಪಡೆತದ ಮೇಲೆ ಶೇ 5 ರಷ್ಟನ್ನು ಕಡಿತಮಾಡಲಾಗುತ್ತದೆ.

ಆದರೆ ಕೇಂದ್ರ ಸರ್ಕಾರವು ಆರ್‌ಬಿಐ ಜೊತೆಗೆ ಸಮಾಲೋಚಿಸಿದ ನಂತರ ಅಧಿಕೃತ ಗೆಜೆಟ್‌ನಲ್ಲಿನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ಮಾಡುವ ಪಾವತಿಗಳಿಗೆ ಕಡಿಮೆ ದರದಲ್ಲಿ ಅಥವಾ ವಿನಾಯತಿ ನೀಡಬಹುದಾಗಿರುತ್ತದೆ.

ಉದಾಹರಣೆಗೆ :

| | |
|---|---|
| ಪಾವತಿಸುವವರು : ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು, ಅಂಚೆ ಕಛೇರಿಗಳು | |
| ಹಿಂಪಡೆಯುವರು/ ಸ್ವಿಕರಿಸುವವರು | |
| **ರಾಮ** – ಪ್ರತಿ ವರ್ಷ ಆದಾಯ ತೆರಿಗೆಯ ವರದಿಯನ್ನು ಸಲ್ಲಿಸಿರುವವನು | **ಕೃಷ್ಣ** – ಕಳೆದ ಮೂರು ಸಾಲಿನಲ್ಲಿ ವರದಿಯನ್ನು ಸಲ್ಲಿಸದಿರುವನು – (FY 2019–20, 2018–19, 2017–18) |
| ನಗದು ಹಿಂಪಡೆತ | ನಗದು ಹಿಂಪಡೆತ |

| ರೂ. 1 ಕೋಟಿ ಮೀರದಿದ್ದಲ್ಲಿ | ರೂ. 1 ಕೋಟಿ ಮೀರಿದಲ್ಲಿ | ರೂ. 20 ಲಕ್ಷ ಮೀರದಿದ್ದಲ್ಲಿ | ರೂ. 20 ಲಕ್ಷ ಮೀರಿದ್ದು 1 ಕೋಟಿ ಮೀರದಿದ್ದಲ್ಲಿ | ರೂ. 1 ಕೋಟಿ ಮೀರಿದಲ್ಲಿ |
|---|---|---|---|---|
| 0 % | ಶೇ 2 ರಷ್ಟು | 0 % | ಶೇ 2ರಷ್ಟು | ಶೇ 5 ರಷ್ಟು |

1. ರಾಮನ ಹಿಂಪಡೆತಗಳು ಮತ್ತು ಟಿಡಿಎಸ್ ಮೊತ್ತಗಳು

| # | ನಗದು ಹಿಂಪಡೆತ | ಹೆಚ್ಚುವರಿ ಹಿಂಪಡೆತ | ಶೇ | ಟಿಡಿಎಸ್ ಮೊತ್ತ |
|---|---|---|---|---|
| 1 | 20,00,000 | 0 | 0 | 0 |
| 2 | 55,00,000 | 0 | 0 | 0 |
| 3 | 1,50,00,000 | 50,00,000 | 2 | 1,00,000 |

2. ಕೃಷ್ಣನ ಹಿಂಪಡೆತಗಳು ಮತ್ತು ಟಿಡಿಎಸ್ ಮೊತ್ತಗಳು

| # | ನಗದು ಹಿಂಪಡೆತ | ಹೆಚ್ಚುವರಿ ಹಿಂಪಡೆತ | ವಿವರಣೆ | ಶೇ | ಟಿಡಿಎಸ್ ಮೊತ್ತ | ಒಟ್ಟು ಟಿಡಿಎಸ್ |
|---|---|---|---|---|---|---|
| 1 | 20,00,000 | 0 | | 0 | 0 | 0 |
| 2 | 55,00,000 | 35,00,000 | ಮೊದಲ 20 ಲಕ್ಷ | 0 | 0 | |
| | | | ನಂತರದ 35 ಲಕ್ಷ | 2 | 70,000 | 70,000 |
| 3 | 1,50,00,000 | 1,30,00,000 | ಮೊದಲ 20 ಲಕ್ಷ | 0 | 0 | |
| | | | ನಂತರದ 80 ಲಕ್ಷ | 2 | 1,60,000 | |
| | | | ನಂತರದ 50 ಲಕ್ಷ | 5 | 2,50,000 | 4,10,000 |

ಗಮನಿಸಬೇಕಾದ ಅಂಶಗಳು

- ಇದು ದಿನಾಂಕ 01-09-2019ರಿಂದ ಜಾರಿಗೆ ಬಂದಿರುವುದಾದರೂ 2019-20ನೇ ವರ್ಷದ ಆರ್ಥಿಕ ವಹಿವಾಟು ಲೆಕ್ಕ ಹಾಕುವಾಗ ದಿನಾಂಕ 01-04-2019ರಿಂದ 31-08-2019ರವರೆಗಿನ ನಗದು ಹಿಂಪಡೆತವನ್ನೂ ಪರಿಗಣಿಸಲಾಗುತ್ತದೆ. 2018-19ನೇ ಸಾಲಿನಲ್ಲಿ ಈಗಾಗಲೇ ಒಂದು ಕೋಟಿ ರೂಗಳಿಗೂ ಹೆಚ್ಚು ನಗದು ಹಿಂಪಡೆತವಾಗಿದ್ದರೆ 01-09-2019ರ ನಂತರ ಹಿಂಪಡೆಯುವ ಎಲ್ಲ ಮೊತ್ತಗಳಿಗೂ ತೆರಿಗೆ ಕಡಿತ ಮಾಡಲಾಗುತ್ತದೆ.
- ಈಗ ಮಾಡಿರುವ ತಿದ್ದುಪಡಿಗಳು ದಿ: 01-07-2020ರಿಂದ ಜಾರಿಗೆ ಬರುವುದಾದರೂ ಲೆಕ್ಕಾಚಾರಗಳು ದಿ: 01-04-2020ರಿಂದಲೇ ಆರಂಭವಾಗುತ್ತದೆ.
- ವ್ಯಕ್ತಿಯ ಪರಿಭಾಷೆಯಲ್ಲಿ ಸಹಕಾರ ಸಂಸ್ಥೆಗಳೂ ಸೇರಿರುತ್ತವೆ. ಈ ಎಲ್ಲ ಅಂಶಗಳೂ ಸಹಕಾರ ಸಂಸ್ಥೆಗಳಿಗೂ ಸಂಪೂರ್ಣವಾಗಿ ಅನ್ವಯವಾಗುವುದರಿಂದ ಸಹಕಾರ ಸಂಸ್ಥೆಗಳು ತಮ್ಮ ನಗದು ವ್ಯವಹಾರಗಳನ್ನು ಮಿತಿಗೊಳಿಸುವುದು ಉತ್ತಮ.
- ಇದು ಬ್ಯಾಂಕೇತರ ಎಲ್ಲ ಸಹಕಾರ ಸಂಸ್ಥೆಗಳಿಗೂ ಅನ್ವಯ
- ಸಹಕಾರ ಸಂಸ್ಥೆಗಳು ತಾವು ವ್ಯವಹರಿಸುವ ಸಹಕಾರೀ (ಡಿಸಿಸಿ) ಬ್ಯಾಂಕೂ ಸೇರಿದಂತೆ ಯಾವುದೇ ಬ್ಯಾಂಕಿನಿಂದ ಪಡೆಯುವ ಹಿಂಪಡೆತಗಳಿಗೆ ಅನ್ವಯ
- ನಗದು ಹಿಂಪಡೆತಗಳಿಗೆ ಮಾತ್ರ ಅನ್ವಯ
- ಬೇರರ್ ಚೆಕ್, ಕ್ರಾಸ್ ಮಾಡದ ಚೆಕ್, ಕೇವಲ ಕ್ರಾಸ್ ಮಾಡಿದ ಚೆಕ್, ಸೆಲ್ಫ್ ಚೆಕ್, ಇತ್ಯಾದಿಗಳ ಮೂಲಕ ಮಾಡಿದರೂ ತೊಂದರೆಯಾಗಬಹುದು

- ಒಂದು ಬ್ಯಾಂಕಿನ ಎಲ್ಲ ಖಾತೆಗಳಿಂದ ಒಟ್ಟು ಹಿಂಪಡೆತ. ಒಂದು ಶಾಖೆ ಯಾ ಒಂದು ಖಾತೆ ಎಂಬುದಲ್ಲ
- ಒಂದು ಆರ್ಥಿಕ ವರ್ಷದಲ್ಲಿ ಪಡೆದ ಹಿಂಪಡೆತಗಳ ಮೊತ್ತ. ಒಂದು ದಿನ ಯಾ ಒಮ್ಮೆ ಎಂದಿಲ್ಲ
- ತೆರಿಗೆ ಕಡಿತದ ದರ 2% ಮತ್ತು (ವಿಶೇಷ ಸಂದರ್ಭಗಳಲ್ಲಿ) 5%
- ಒಂದು ಕೋಟಿ ಮೀರಿದ (ವಿಶೇಷ ಸಂದರ್ಭಗಳಲ್ಲಿ 20 ಲಕ್ಷ ಮೀರಿದ) ಮೊತ್ತಕ್ಕೆ ಮಾತ್ರ ಅನ್ವಯ
- ತೆರಿಗೆ ಕಡಿತದ ಪ್ರಮಾಣ ಪತ್ರ ನೀಡಲಾಗುವುದು. ತೆರಿಗೆ ಕಟಾವು ಮಾಡಿಕೊಂಡ ವ್ಯಕ್ತಿಯು ತನ್ನ ತೆರಿಗೆ ವರದಿ ಸಲ್ಲಿಸಿ ಈ ತೆರಿಗೆ ಮೊತ್ತವನ್ನು ಹಿಂಪಡೆಯಬಹುದು.

– ಮಾಹಿತಿ ಸಂಗ್ರಹ ಮತ್ತು ಪ್ರಸ್ತುತಿ : ಸಿಎ॥ ವಿಜೇಂದ್ರಕಾಮತ್, ತೀರ್ಥಹಳ್ಳಿ